ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ

ದೂರವಾಣಿ :0824 – 2423913
0824 – 2411242
ಇ–ಮೇಲ್:dcf_mngt@yahoo.co.in
dcfmng@aranya.gov.in

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಮಂಗಳೂರು ವಿಭಾಗ, ಪಿ.ಡಬ್ಲ್ಯೂಡಿ.ಕಟ್ಟಡ, ನೆಹರೂ ಮೈದಾನದ ಬಳಿ ಮಂಗಳೂರು 575001

ಸಂ:ಭೂಶಾಖೆ.ಕೆ.ವಿ.ಸ್ಟೇಷನ್.11/2004–05/14
Proposal No.FP/KA/TRANS/24339/2017.

ದಿನಾಂಕ:20–05–2020.

ಇವರಿಗೆ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಮಂಗಳೂರು ವೃತ್ತ,
ಮಂಗಳೂರು.

ಮಾನ್ಯರೇ,

ವಿಷಯ : Diversion of 0.80 ha. of Reserved Forest land in Sy No. 125/P of Sampaje village, Sulya Taluk, Dakshina Kannada District, Mangalore Division for construction of 33/11 KV substation at Rajarampura in favour of the Executive Engineer (Elec), MESCOM, Puttur Division.

ಉಲ್ಲೇಖ
1. ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ:15–9–2017, 29–1–2018, ಮತ್ತು 15–7–2019.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ಇವರ ಕಛೇರಿ ಪತ್ರ ಸಂಖ್ಯೆ Old file No. A5/2.GFL/CR-62/2016-17, E-office file No. KFD/HOFF/A5(2)GFL: 170/2019/FC, E-134003, Dt:07/11-12-2019.
3. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂರಕ್ಷಣೆ), ಬೆಂಗಳೂರು ಇವರ ಪತ್ರ ಸಂಖ್ಯೆ Old file No. A5/2.GFL/CR-62/2016-17, E-office file No. KFD/HOFF/A5(2)GFL: 170/2019/FC, E-134003, Dt:07-03-2020
4. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಮೆಸ್ಕಾಂ) ಉಪ ವಿಭಾಗ, ಸುಳ್ಯ ಇವರ ಕಛೇರಿ ಪತ್ರ ಸಂಖ್ಯೆ ಸಕಾಇಂ(ವಿ)/ ಸ.ಇಂ(ತಾಂ)/ ಸುಳ್ಯ/19–20/3856–63, ದಿನಾಂಕ:18–3–2020.
5. ವಲಯ ಅರಣ್ಯಾಧಿಕಾರಿ, ಸುಳ್ಯ ವಲಯ, ಸುಳ್ಯ ಇವರ ಕಛೇರಿ ಪತ್ರ ಸಂಖ್ಯೆ ಸಾ:2253/2019–20/11 ಕೆ.ವಿ. ಸಬ್‌ಸ್ಟೇಷನ್, ದಿ:07–5–2020.
6. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸುಬ್ರಹ್ಮಣ್ಯ ಉಪ ವಿಭಾಗ, ಸುಳ್ಯ ಸಅಸಂ:ಸಾ;80/ರಾಜಾರಾಂ ಪುರಂ/ಕೆವಿ ಲೈನ್/20–21, ದಿ:13–5–2020.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಲ್ಲಿಸುವುದೇನೆಂದರೆ, ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್), ಮೆಸ್ಕಂ, ಪುತ್ತೂರು ವಿಭಾಗ ಇವರು ಸುಳ್ಯ ತಾಲೂಕು ಸಂಪಾಜೆ ಗ್ರಾಮದ ರಾಜಾರಾಂಪುರ ಎಂಬಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 33/11 ಕೆ.ವಿ. ವಿದ್ಯುತ್ ಉಪ ಕೇಂದ್ರಕ್ಕೆ 0.80 ಹೆ. ಭೂಮಿಯನ್ನು

ಅರಣ್ಯೇತರ ಉದ್ದೇಶಕ್ಕಾಗಿ ಬಳಸಲು ಅರಣ್ಯ (ಸಂರಕ್ಷಣಾ) ಕಾಯ್ದೆ 1980ರ ಅಡಿಯಲ್ಲಿ ಅನುಮತಿಯನ್ನು ಕೋರಿ ಸಲ್ಲಿಸಿದ ಪ್ರಸ್ತಾವನೆಯನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ Forestsclearance.nic.in ವೆಬ್‌ಸೈಟಿನಲ್ಲಿ ಆನ್‌ಲೈನ್ ಮುಖಾಂತರ ಪ್ರಸ್ತಾವನೆಯನ್ನು ಉಲ್ಲೇಖ(1)ರ ಪ್ರಕಾರ ಸಲ್ಲಿಸಲಾಗಿರುತ್ತದೆ.

ಇದೀಗ ಉಲ್ಲೇಖ(3)ರಲ್ಲಿ ಸದ್ರಿ ಪ್ರಸ್ತಾವನೆ ಬಗ್ಗೆ ಉಪಯೋಗಿ ಸಂಸ್ಥೆಯಿಂದ 0.80 ಹೆ. ಅರಣ್ಯ ಜಮೀನಿನ ಅಗತ್ಯತೆ ಬಗ್ಗೆ ಸಮರ್ಥನೆ (Justification) ಹಾಗೂ ಅರಣ್ಯ ಜಮೀನಿನ ಬದಲಿಗೆ ಕನಿಷ್ಟ 03 ಪರ್ಯಾಯ ಜಮೀನುಗಳ ಲಭ್ಯತೆ ಬಗ್ಗೆ ಪರಿಶೀಲನೆ ನಡೆಸಿ ಅವುಗಳ fesibility ಬಗ್ಗೆ ವರದಿ ಸಲ್ಲಿಸಲು ಸೂಚಿಸಲಾಗಿರುತ್ತದೆ.

ಅದರಂತೆ ಉಪಯೋಗಿ ಸಂಸ್ಥೆಯಾದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಮೆಸ್ಕಾಂ) ಉಪ ವಿಭಾಗ, ಸುಳ್ಯ ಇವರು 0.80 ಹೆ. ಜಮೀನಿನ ಅಗತ್ಯತೆ ಬಗ್ಗೆ (Justification) ಹಾಗೂ ಕೋರಿಕೆ ಇಡಲಾಗಿರುವ ಅರಣ್ಯದ ಜಮೀನಿನ ಬದಲಿಗೆ ಕನಿಷ್ಟ 03 ಪರ್ಯಾಯ ಜಮೀನುಗಳ ಲಭ್ಯತೆ ಬಗ್ಗೆ ವರದಿಯನ್ನು ಉಲ್ಲೇಖ(4)ರ ಪತ್ರದಲ್ಲಿ ಸಲ್ಲಿಸಿರುತ್ತಾರೆ.

ಸದ್ರಿ ವರದಿಯನ್ನು ವಲಯ ಅರಣ್ಯಾಧಿಕಾರಿ, ಸುಳ್ಯ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸುಬ್ರಹ್ಮಣ್ಯ ಉಪ ವಿಭಾಗ, ಸುಳ್ಯ ಇವರು ಉಲ್ಲೇಖ(5) ಮತ್ತು (6)ರಲ್ಲಿ ಕ್ರಮವಾಗಿ ಪರಿಶೀಲಿಸಿ ವರದಿಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಆ ಪ್ರಕಾರ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 33/11 ಕೆ.ವಿ. ಸುಳ್ಯ ವಿದ್ಯುತ್ ಉಪಕೇಂದ್ರದಿಂದ ತೋಡಿಕಾನ, ಅರಂತೋಡು, ಸಂಪಾಜೆ, ಆಲೆಟ್ಟಿ, ಮರ್ಕಂಜ ಹಾಗೂ ಮಡಿಕೇರಿ ಗಡಿ ಪ್ರದೇಶಗಳಾದ ಚೆಂಬು, ಕೊಯನಾಡು ಮತ್ತು ಇನ್ನಿತರ ಗ್ರಾಮಗಳಿಗೆ ವಿದ್ಯುತ್ ಪೂರೈಕೆ ಮಾಡುತ್ತಿದ್ದು, ಸದ್ರಿ ಉಪಕೇಂದ್ರವು ಮೇಲೆ ಹೇಳಲಾದ ಗ್ರಾಮಗಳಿಂದ ಸುಮಾರು 30-40 ಕಿ.ಮೀ. ದೂರದಲ್ಲಿರುತ್ತದೆ. ಅಲ್ಲಿಂದ ವಿದ್ಯುತ್ ಜಾಲ ನಿರ್ಮಿಸಿ ವಿದ್ಯುತ್ ಸರಬರಾಜು ಮಾಡುತ್ತಿರುವುದರಿಂದ ಲೋ-ವೋಲ್ಟೇಜ್‌ನಂತಹ ಸಮಸ್ಯೆಗಳಾಗಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿರುವುದು ಸ್ಥಳೀಯ ಗ್ರಾಮಸ್ಥರಿಂದ ತಿಳಿದುಬಂದಿರುತ್ತದೆ. ಈ ಸಮಸ್ಯೆಯನ್ನು ಸರಿದೂಗಿಸುವ ಸಲುವಾಗಿ ಹಾಗೂ ಸಾರ್ವಜನಿಕ ಉದ್ದೇಶಕ್ಕಾಗಿ ಸುಳ್ಯದಿಂದ ಸುಮಾರು 14 ಕಿ.ಮೀ. ದೂರದಲ್ಲಿರುವ ರಾಜಾರಾಂಪುರ ಎಂಬ ಪ್ರದೇಶದಲ್ಲಿ ಮತ್ತೊಂದು 33/11 ಕೆ.ವಿ. ವಿದ್ಯುತ್ ಉಪಕೇಂದ್ರ ನಿರ್ಮಾಣ ಮಾಡಿ ಸ್ಥಳೀಯ ಗ್ರಾಮಗಳಿಗೆ 11 ಕೆ.ವಿ. ಫೀಡರ್‌ಗಳ ಮೂಲಕ ವಿದ್ಯುತ್ ಸರಬರಾಜು ಮಾಡಲು ಪ್ರಸ್ತಾವಿತ ಸ್ಥಳದ ಅಗತ್ಯತೆಯು ಕಂಡುಬಂದಿರುತ್ತದೆ. ಮುಂದುವರಿದು, ವಿದ್ಯುತ್ ಉಪಕೇಂದ್ರದ ಸ್ಥಾಪನೆಗೆ ಸೂಚಿಸಲಾದ 03 ಪರ್ಯಾಯ ಸ್ಥಳಗಳನ್ನು ಪರಿಶೀಲನೆ ನಡೆಸಲಾಗಿ ಪ್ರಥಮ ಜಮೀನು ಸಂಪಾಜೆ ಗ್ರಾಮದ ಕಲ್ಲುಗುಂಡಿ, 2ನೇ ಜಮೀನು ಸಂಪಾಜೆ ಗ್ರಾಮದ ಕಡೆಪಾಲ-ಬಂಟೋಡಿ ಹಾಗೂ 3ನೇ ಜಮೀನು ಸಂಪಾಜೆ ಗ್ರಾಮದ ನೆಲ್ಲಿಕುಮೇರಿ ಎಂಬಲ್ಲಿ ಗುರುತಿಸಿದ ಪ್ರದೇಶಗಳಾಗಿದ್ದು, ಮೇಲೆ ಹೇಳಲಾದ ಪ್ರದೇಶಗಳಲ್ಲಿ ವಿದ್ಯುತ್ ಉಪಕೇಂದ್ರ ಸ್ಥಾಪಿಸಬೇಕಾದಲ್ಲಿ 5 ರಿಂದ 6 ಕಿ.ಮೀ. ಹೊಸದಾಗಿ Heavy ವಿದ್ಯುತ್ ಜಾಲ ನಿರ್ಮಿಸಬೇಕಾದ ಅಗತ್ಯವಿರುತ್ತದೆ. ಅಲ್ಲದೆ ವಿದ್ಯುತ್ ತಂತಿ ಎಳೆಯುವ ಪ್ರದೇಶವು ಹಾಗೂ ಉಪಕೇಂದ್ರ ಸ್ಥಾಪಿಸಲು

ಉದ್ದೇಶಿಸಿರುವ ಪ್ರದೇಶವು ಮೀಸಲು ಅರಣ್ಯದ ಒಳಗಡೆ ಬರುತ್ತಿದ್ದು, ರಾಷ್ಟ್ರೀಯ ಹೆದ್ದಾರಿ ಮಾಣಿ – ಮೈಸೂರು ರಸ್ತೆಯಿಂದ ಸುಮಾರು 700 ರಿಂದ 800 ಮೀಟರ್‌ನಷ್ಟು ಒಳಗಡೆ ಇರುತ್ತದೆ. ಆದ್ದರಿಂದ ವಿದ್ಯುತ್ ಜಾಲಕ್ಕಾಗಿ ಹೆಚ್ಚಿನ ಅರಣ್ಯ ಪ್ರದೇಶ ಮತ್ತು ಮರಗಳನ್ನು ಕಡಿಯುವ ಅವಶ್ಯಕತೆ ಕಂಡುಬಂದಿರುತ್ತದೆ. ಅಲ್ಲದೆ ಸದ್ರಿ ವಿಷಯವನ್ನು ಸೂಕ್ತ ಪ್ರಾಧಿಕಾರಕ್ಕಾಗಿ ಪ್ರಸ್ತಾವನೆಯನ್ನು ಸಲ್ಲಿಸಿ ಕಾರ್ಯಗತಗೊಳಿಸಲು ಹೆಚ್ಚಿನ ಸಮಯ ತಗಲಬಹುದಾಗಿರುತ್ತದೆ ಹಾಗೂ ಪರ್ಯಾಯ ಸ್ಥಳಗಳು ಮೇಲೆ ಹೇಳಲಾದ ಗ್ರಾಮಗಳಿಂದ ತುಂಬಾ ದೂರದಲ್ಲಿದ್ದು, ಸದ್ರಿ ಪ್ರದೇಶಗಳಿಗೆ ವಿದ್ಯುತ್ ಸಂಪರ್ಕ ಎಳೆಯುವರೇ ಹೆಚ್ಚಿನ ಸಮಯ ಹಾಗೂ ವೆಚ್ಚ ತಗಲಬಹುದಾಗಿರುತ್ತದೆ. ಆದ್ದರಿಂದ ರಾಜಾರಾಂಪುರ ಪ್ರದೇಶದಿಂದ ವಿದ್ಯುತ್ ಜಾಲಗಳನ್ನು ಎಳೆಯಲು ಹೆಚ್ಚಿನ ಅನುಕೂಲವಿದ್ದು, ಸದ್ರಿ ಪ್ರದೇಶವು ರಾಷ್ಟ್ರೀಯ ಹೆದ್ದಾರಿ ಮಾಣಿ – ಮೈಸೂರು ರಸ್ತೆಯ ಪಕ್ಕದಲ್ಲಿರುತ್ತದೆ. ಆದುದರಿಂದ ರಾಜಾರಾಂಪುರ ಪ್ರದೇಶದಲ್ಲಿ ಸಬ್‌ಸ್ಟೇಷನ್ ನಿರ್ಮಿಸುವುದು ಸೂಕ್ತವೆಂದು ವರದಿಸುತ್ತಾ, ಉಪಯೋಗಿ ಸಂಸ್ಥೆಯಾದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಮೆಸ್ಕಾಂ) ಉಪ ವಿಭಾಗ, ಸುಳ್ಯ ಇವರು ಸಲ್ಲಿಸಿದ ಪತ್ರವನ್ನು ಇದರೊಂದಿಗೆ ಲಗ್ತೀಕರಿಸಿ ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ನಂಬುಗೆಯ,

ಉಪ ಅರಣ್ಯ ಸಂರಕ್ಷಣಾಧಿಕಾರಿ
ಮಂಗಳೂರು ವಿಭಾಗ, ಮಂಗಳೂರು.

1. ಪ್ರತಿಯನ್ನು ಪ್ರತಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸುಬ್ರಹ್ಮಣ್ಯ ಉಪ ವಿಭಾಗ, ಸುಳ್ಯ ಮತ್ತು ವಲಯ ಅರಣ್ಯಾಧಿಕಾರಿ, ಸುಳ್ಯ ವಲಯ, ಸುಳ್ಯ ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2. ಪ್ರತಿಯನ್ನು ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್), ಮೆಸ್ಕಂ, ಪುತ್ತೂರು ವಿಭಾಗ ಇವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
3. ಪ್ರತಿಯನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಮೆಸ್ಕಾಂ) ಉಪ ವಿಭಾಗ, ಸುಳ್ಯ ಇವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ರವಾನಿಸಿದೆ
20 MAY 2020
ರವಾನೆ ಸಹಾಯಕರು